**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.**

# ಸಿ.ಸಿ. ಸಂಖ್ಯೆ: 3639/22

**ಸಾಕ್ಷಿಯನ್ನು ದಿಃ 23.09.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಎಲ್. ಶ್ರೀನಿವಾಸ | ಸಿ.ಡಬ್ಲ್ಯೂಃ **1** ಪಿ.ಡಬ್ಲ್ಯೂಃ **2** |
| ತಂದೆಯ ಹೆಸರು | ಲಿಂಗಯ್ಯ | |
| ವಯಸ್ಸು | **62** ವರ್ಷ | |
| ಕೆಲಸ | ನಿವೃತ್ತ ಪೊಲೀಸ್ ಇನ್ಸ್ ಪೆಕ್ಟರ್ | |
| ವಾಸಸ್ಥಳ | ಮೈಸೂರು | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ನಾನು ದಿಃ 26.04.2022 ರಿಂದ ದಿಃ 02.02.2023 ರವರೆಗೆ ಆಗಿ ಹುಣಸೂರು ಪಟ್ಟಣ ಠಾಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.09.2022 ರಂದು ಬೆಳಿಗೆ11.30 ಗಂಟೆ ಸಮಯದಲ್ಲಿ ನಾನು ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರೊಬ್ಬರು ಬಜಾಜ್ ಸ್ಟ್ರೀಟ್ ಸಂತೆಮಾಳದ ಅಂಗಡಿಯಲ್ಲಿ ಆರೋಪಿಯು ದನದ ಮಾಂಸವನ್ನು ಯಾವುದೇ ರಹದಾರಿ ಇಲ್ಲದೆ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ನಾನು ಪೊಲೀಸ್ ಠಾಣೆಗೆ ಪಂಚರಾದ ಚಾಸಾ-2,3 ರವರನ್ನು ಬರಮಾಡಿಕೊಂಡು, ವಿಚಾರ ತಿಳಿಸಿ, ತನಿಖೆಗಾಗಿ ಸಹಕರಿಸಲು ಕೋರಿ ನೋಟೀಸ್ ಜಾರಿ ಮಾಡಿರುತ್ತೇನೆ.

2. ನಂತರ ನಾನು, ಚಾಸಾ-9,10 ರವರನ್ನು ನಮ್ಮ ಠಾಣೆ ಜೀಪ್ನಲ್ಲಿ ಮಧ್ಯಾಹ್ನ 12.00 ರ ಸಮಯಕ್ಕೆ ಹೊರಟು 12.05 ನಿಮಿಷಕ್ಕೆ ಕೃತ್ಯ ನಡೆದ ಸ್ಥಳವಾದ ಆರೋಪಿಯ ಅಂಗಡಿಯಲ್ಲಿ ಹೋಗಿ ನೋಡಿದಾಗ ಅಲ್ಲಿ 15 ಕೆ.ಜಿ ತೂಕದ ದನದ ಮಾಂಸವನ್ನು ನೇತುಹಾಕಿದ್ದು ಆರೋಪಿಯನ್ನು ವಿಚಾರ ಮಾಡಿದಾಗ ಯಾವುದೇ ರಹಾದರಿ ಇರಲಿಲ್ಲ. ನಂತರ ಪಂಚರ ಸಮಕ್ಷಮ ದನದ ಮಾಂಸ ಹಾಗೂ ಅಲ್ಲಿ ಇದ್ದಂತಹ ತೂಕದ ಯಂತ್ರ, ಬಟ್ಟುಗಳು ಮಾಂಸ ನೇತುಹಾಕಿದ್ದ ಕೊಕ್ಕೆ ಗಳನ್ನು ಪಂಚರ ಸಮಕ್ಷಮ ಮಧ್ಯಾಹ್ನ. 12.10 ರಿಂದ 1.10 ರವರೆಗೆ ಮಹಜರ್ ಮುಖೇನ ಅಮಾನತ್ತುಪಡಿಸಿಕೊಂಡು, ಮಹಜರ್ ಕಾಲದಲ್ಲಿ ಭಾವಚಿತ್ರಗಳನ್ನು ತೆಗೆದು ಸಿ.ಡಿ. ಮಾಡಲಾಯಿತು. ಪಂಚನಾಮೆ ನಿಪಿ.1 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಪಂಚನಾಮೆ ಕ್ರಮ ಜರುಗಿಸುವಾಗ ತಾನು ತೆಗೆದಂತಹ ವೀಡಿಯೋವನ್ನು ಒಂದು ಸಿ.ಡಿ. ಮೂಲಕ ಮಾನ್ಯ ನ್ಯಾಯಾಲಯಕ್ಕೆ ನೀಡಿರುತ್ತಾರೆ. ಸದರಿ ಸಿ.ಡಿ. ಯನ್ನು ಮು.ಮಾ-1 ಎಂದು ಗುರುತಿಸಲಾಯಿತು. ಮಾಂಸ

ತೂಕದ ಯಂತ್ರವನ್ನು ಮು.ಮಾ-2 ಎಂದು, ಕಬ್ಬಿಣದ 5 ತೂಕದ ಬಟ್ಟುಗಳನ್ನು ಮು.ಮಾ-3 ಎಂದು, ಮಾಂಸವನ್ನು ಕತ್ತರಿಸಲು ಉಪಯೋಗಿಸುವ ಎರಡು ಕಬ್ಬಿಣದ ಸತ್ತರ್ ಗಳನ್ನು ಮು.ಮಾ-4 ಹಾಗೂ 5 ಎಂದು, ಮಾಂಸವನ್ನು ನೇತುಹಾಕಲು ಉಪಯೋಗಿಸುವ ಕಬ್ಬಿಣದ ಕೊಂಡಿಯನ್ನು ಮು.ಮಾ-6 ಹಾಗೂ 7 ಎಂದು ಗುರುತಿಸಲಾಯಿತು.

3. ನಂತರ ಆರೋಪಿಯ ಜೊತೆ ಠಾಣೆಗೆ ಬಂದು ಸ್ವವರದಿಯನ್ನು ತಯಾರಿಸಿ ಮೊಕದ್ದಮೆ ಸಂಖ್ಯೆ 192/22 ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯದ ಹಾಗೂ ನನ್ನ ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ. ಸ್ವವರದಿಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

4. ಸದರಿ ಮಾಲುಗಳನ್ನು PF192/2022 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಯನ್ನು ದಸ್ತಗಿರಿ ಮಾಡಿ, ಕ್ರಮ ಕೈಗೊಂಡು, ನೋಟೀಸ್ ಜಾರಿ ಮಾಡಿ ಆರೋಪಿಯ ಸ್ವಇಚ್ಛಾ ಹೇಳಿಕೆ ಹಾಗೂ ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಪಡೆದಿರುತ್ತೇನೆ. ನಂತರ ಆರೋಪಿಯನ್ನು ರಿಮಾಂಡ್ ಅರ್ಜಿಯ ಜೊತೆ ಸಿಬ್ಬಂದಿ ಬೆಂಗಾವಲಿನಲ್ಲಿ ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸುತ್ತೇನೆ. ಅದೇ ದಿನ ಚಾಸಾ-8 ರವರಿಗೆ ಅಮಾನತ್ತುಪಡಿಸಿಕೊಂಡಿದ್ದ ಮಾಂಸವನ್ನು ವೀಲೆವಾರಿ ಮಾಡಲು ಅನುಮತಿ ಕೋರಿ ಪತ್ರ ಬರೆದಿರುತ್ತೇನೆ. ಚಾಸಾ-8 ರವರು ಅದೇ ದಿನ ವೀಲೆವಾರಿ ಮಾಡಲು ಅನುಮತಿ ಪತ್ರವನ್ನು ನೀಡಿರುತ್ತಾರೆ. ವಿಲೇ ಮಾಡಲು ಅನುಮತಿ ಕೋರಿ ಪತ್ರವನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ)ಎಂದು ಗುರುತಿಸಲಾಯಿತು. ವೀಲೆವಾರಿ ಮಾಡಲು ಅನುಮತಿ ನೀಡಿದ ಆದೇಶ ಪತ್ರವನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2,3 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-7 ರವರಿಗೆ ಅಮಾನತ್ತುಪಡಿಸಿಕೊಂಡಿರುವ ಮಾಂಸವನ್ನು ಪರಿಶೀಲನೆ ಮಾಡಿ ವರದಿ ನೀಡಿಲು ಕೋರಿಕಾ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಕೋರಿಕಾ ಪತ್ರವನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಅದೇ ದಿನ ಪಂಪ್ ಹೌಸ್ ರಸ್ತೆಯಲ್ಲಿ ದನದ ಮಾಂಸವನ್ನು ಚಾಸಾ-4,5 ರವರ ಸಮಕ್ಷಮ ಸಂಜೆ 7.00 -

7.30ರ ಸಮಯದಲ್ಲಿ ಗುಂಡಿ ತೆಗೆದು ಮುಚ್ಚಲಾಯಿತು. ಸದರಿ ಮಾಂಸ ವಿಲೇವಾರಿ ಪಂಚನಾಮೆಯನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನಿಪಿ.9 ರಿಂದ 13 ಎಂದು ಗುರುತಿಸಲಾಯಿತು.

5. ದಿಃ 30.09.2022ರಂದು ಚಾಸಾ- 9,10ರವರ ಹೇಳಿಕೆ ಪಡೆದಿರುತ್ತೇನೆ. ದಿಃ 15.11.2022ರಂದು ಹುಣಸೂರು ನಗರಸಭೆ ಅಧಿಕಾರಿ ಚಾಸಾ-8ರವರು ಕೃತ್ಯ ನಡೆದ ಸ್ಥಳದ ದಾಖಲೆಗಳನ್ನು ನೀಡಿರುವುದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ-8ರವರು ನೀಡಿದ ಆರೋಪಿಯ ಅಂಗಡಿಗೆ ಸಂಬಂಧಪಟ್ಟಂತೆ ಜಾಮೀನು ತೆರಿಗೆ ದೃಢೀಕೃತ ನಕಲನ್ನು ನಿಪಿ.14 ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಅದೇ ದಿನ ಅಂಗಡಿ ಮಾಲೀಕರಾದ ಚಾಸಾ-6ರವರ ಹೇಳಿಕೆ ಪಡೆದಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎನ್.ಪಿ ವಕೀಲರು ಪ್ರಕರಣದ ಸತ್ಯಾಸತ್ಯತೆಗಾಗಿ ಚಾಸಾ-4 ರಿಂದ 9ರವರ ವಿಚಾರಣೆ ಹಾಗೂ ಅಡ್ಡವಿಚಾರಣೆ ಮುಗಿದ ನಂತರ ಈ ಸಾಕ್ಷಿದಾರರ ಪಾಟೀಸವಾಲು ಮಾಡುವುದಾಗಿ ತಿಳಿಸಿದ ಕಾರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.